# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2438 |
| ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 27/03/2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸುಮಾರು 25 ವರ್ಷಗಳ ಹಿಂದೆ ಕರ್ನಾಟಕ ರಾಜ್ಯ ಸರ್ಕಾರ ಮಹಿಳೆಯರ ಸಬಲೀಕರಣದ ಹಿನ್ನಲೆಯಲ್ಲಿ ಮತ್ತು ಮಹಿಳೆಯರಿಗೆ ಸಹಾಯ ಒದಗಿಸುವ ಹಿನ್ನೆಲೆಯಲ್ಲಿ ಜಿಲ್ಲಾ ಸಾಂತ್ವನ ಕೇಂದ್ರಗಳನ್ನು ರಚಿಸಿರುತ್ತದೆ. ಇಂತಹ ಸಾಂತ್ವನ ಕೇಂದ್ರಗಳನ್ನು ಮುಚ್ಚಲು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಅಭಿಪ್ರಾಯ ನೀಡಿದೆಯೇ; | ಆರ್ಥಿಕ ಇಲಾಖೆಯ ಟಿಪ್ಪಣಿ ದಿನಾಂಕ: 19.12.2025 ರನ್ವಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಈಗಾಗಲೇ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿರುವ ಒನ್ ಸ್ಟಾಪ್ ಸೆಂಟರ್ (ಸಖಿ ಕೇಂದ್ರ) ಗಳಿಗೆ ಮಹಿಳೆಯರ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿ, ಜಿಲ್ಲಾ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ 23 ಸಾಂತ್ವನ ಕೇಂದ್ರಗಳನ್ನು ತಾಲ್ಲೂಕು ಮಟ್ಟದ ಸಾಂತ್ವನ ಕೇಂದ್ರಗಳಾಗಿ ಸ್ಥಳಾಂತರಿಸಲು ತಿಳಿಸಲಾಗಿದೆ. |
| ಆ) | ಮಹಿಳೆಯರ ಸಬಲೀಕರಣದ ಹಿನ್ನೆಲೆಯಲ್ಲಿ ಸಾಂತ್ವನ ಕೇಂದ್ರಗಳನ್ನು ಮುಂದುವರೆಸುವ ಅವಶ್ಯಕತೆ ಸರ್ಕಾರ ಮನಗಂಡಿದೆಯೇ: ಮನಗಂಡಿದ್ದಲ್ಲಿ, ಸಾಂತ್ವನ ಕೇಂದ್ರಗಳನ್ನು ಉಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ: | ಪ್ರಸ್ತುತ ರಾಜ್ಯದಲ್ಲಿ 154 ತಾಲ್ಲೂಕು ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕ ಇಲಾಖೆಯ ಸೂಚನೆಯಂತೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಈಗಾಗಲೇ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿರುವ ಒನ್ ಸ್ಟಾಪ್ ಸೆಂಟರ್ (ಸಖಿ ಕೇಂದ್ರ) ಗಳಿಗೆ ಮಹಿಳೆಯರ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿ, ಜಿಲ್ಲಾ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ 23 ಸಾಂತ್ವನ ಕೇಂದ್ರಗಳನ್ನು ತಾಲ್ಲೂಕು ಮಟ್ಟದ ಸಾಂತ್ವನ ಕೇಂದ್ರಗಳಾಗಿ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಜಿಲ್ಲಾ ಸಾಂತ್ವನ ಕೇಂದ್ರಗಳ ಮೂಲಕ ಮಹಿಳೆಯರಿಗೆ ಅಶಕ್ತ ಮಹಿಳೆಯರಿಗೆ ಸಹಾಯ ಹಸ್ತ ನೀಡುವ ನಿಟ್ಟಿನಲ್ಲಿ ಜಿಲ್ಲಾ ಸಾಂತ್ವನ ಕೇಂದ್ರಗಳನ್ನು ಮುಂದುವರೆಸಲು ದಿ:06.10.2025 ರಲ್ಲಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದ್ದು, ಈ ನಿರ್ಣಯಕ್ಕೆ ಅನುಗುಣವಾಗಿ ಜಿಲ್ಲಾ ಸಾಂತ್ವಾನ ಕೇಂದ್ರಗಳನ್ನು ಮುಂದುವರೆಸಲು ಯಾವಾಗ ಆದೇಶ ಹೊರಡಿಸಲಾಗುವುದು; | ಆರ್ಥಿಕ ಇಲಾಖೆಯ ಟಿಪ್ಪಣಿ ದಿನಾಂಕ: 19.12.2025 ರನ್ವಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಈಗಾಗಲೇ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿರುವ ಒನ್ ಸ್ಟಾಪ್ ಸೆಂಟರ್ (ಸಖಿ ಕೇಂದ್ರ) ಗಳಿಗೆ ಮಹಿಳೆಯರ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿ, ಜಿಲ್ಲಾ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ 23 ಸಾಂತ್ವನ ಕೇಂದ್ರಗಳನ್ನು ತಾಲ್ಲೂಕು ಮಟ್ಟದ ಸಾಂತ್ವನ ಕೇಂದ್ರಗಳಾಗಿ ಸ್ಥಳಾಂತರಿಸಲು ತಿಳಿಸಲಾಗಿದೆ. |

| | | |
|---|---|---|
| ಈ) | ಮಹಿಳೆಯರ ಸಬಲೀಕರಣದ ಹಿನ್ನಲೆಯಲ್ಲಿ ಇಡೀ ರಾಜ್ಯದಲ್ಲಿ ಕೇವಲ 1 ಕೋಟಿ 50 ಲಕ್ಷ ಮೊತ್ತವನ್ನು ಜಿಲ್ಲಾ ಸಾಂತ್ವನ ಕೇಂದ್ರಗಳ ನಿರ್ವಹಣೆಗೆ ವೆಚ್ಚ ಮಾಡುತ್ತಿದ್ದು, ಇದು ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ ಎಂಬುದನ್ನು ಸರ್ಕಾರ ಮನ ಗಂಡಿದೆಯೇ; ಮನಗಂಡಿದ್ದಲ್ಲಿ, ಸಾಂತ್ವನ ಕೇಂದ್ರಗಳನ್ನು ಮುಂದುವರೆಸಲು ರಾಜ್ಯ ಸರ್ಕಾರ ನಿರ್ದೇಶನ ನೀಡುವುದು: | ಆರ್ಥಿಕ ಇಲಾಖೆಯ ಟಿಪ್ಪಣಿ ದಿನಾಂಕ: 19.12.2025 ರನ್ವಯ 23 ಜಿಲ್ಲಾ ಸಾಂತ್ವನ ಕೇಂದ್ರಗಳನ್ನು ತಾಲ್ಲೂಕು ಮಟ್ಟದ ಕೇಂದ್ರಗಳಾಗಿ ಮುಂದುವರಿಸಲು ಕ್ರಮವಹಿಸಲಾಗುತ್ತಿದೆ. |
| ಉ) | ರಾಜ್ಯದಲ್ಲಿ ಇರುವ ಜಿಲ್ಲಾ ಸಾಂತ್ವನ ಕೇಂದ್ರಗಳು ಎಷ್ಟು ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಜಿಲ್ಲಾ ಸಾಂತ್ವನ ಕೇಂದ್ರಗಳಿಗೆ ನೀಡಿರುವ ಅನುದಾನವೆಷ್ಟು; ಸಾಂತ್ವನ ಕೇಂದ್ರಗಳ ಸಹಿತವಾಗಿ ಸರ್ಕಾರ ನೀಡಿರುವ ಅನುದಾನಗಳ ಸಹಿತ ಮೂರು ವರ್ಷಗಳ ಅಂಕಿ ಅಂಶಗಳನ್ನು ಒದಗಿಸುವುದು? | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಂತ್ವನ ಕೇಂದ್ರಗಳಿಗೆ ಬಿಡುಗಡೆಯಾದ ಅನುದಾನದ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |

**ಸಂಖ್ಯೆ: ಮಮಇ 85 ಮಮಅ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

**ಶ್ರೀ ರಮೇಶ್ ಬಾಬು, ಮಾನ್ಯ ವಿಧಾನ ಪರಿಷತ್ ಸದಸ್ಯರು (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2438 ಕ್ಕೆ ಅನುಬಂಧ**

**ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಂತ್ವನ ಕೇಂದ್ರಗಳಿಗೆ ಬಿಡುಗಡೆಯಾದ ಅನುದಾನದ ವಿವರ**

| ಕ್ರ.ಸಂ | ಜಿಲ್ಲೆಗಳು | ಸ್ವಯಂಸೇವಾ ಸಂಸ್ಥೆಗಳು | ಬಿಡುಗಡೆಯಾದ ಅನುದಾನ | | |
|---|---|---|---|---|---|
| | | | 2022-23 | 2023-24 | 2024-25 |
| 1 | ಬಾಗಲಕೋಟೆ | ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ, ಆರ್.ಡಿ.ಎಫ್, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ವಿಬಿ ಸಂಘದ ಆವರಣ, ಕಾಲೇಜ್ ಹತ್ತಿರ, ವಿದ್ಯಾಗಿರಿ, ಬಾಗಲಕೋಟೆ ಜಿಲ್ಲೆ-587103 | 634896 | 574896 | 644496 |
| 2 | ಬೆಂಗಳೂರು ನಗರ | ಜನೋದಯ -3, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ 2, ಎಂ.ಎಸ್.ಬಿಲ್ಡಿಂಗ್, ಬೆಂಗಳೂರು-560001 | 584496 | 549911 | 577496 |
| 3 | ಬೆಂಗಳೂರು ಗ್ರಾಮಾಂತರ | ಗ್ರಾಮೀಣ ಅಭ್ಯುದಯ ಸೇವಾ ಸಂಸ್ಥೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, 4ನೇ ವಾರ್ಡ್, ಕರ್ಷ ರಸ್ತೆ, ರೋಜಿಪುರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾ. | 625000 | 560496 | 632496 |
| 4 | ಬೆಳಗಾವಿ | ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಸಿ.ಟಿ.ಎಸ್.ನಂ.1008, ಭಾರತ ಕಾಲೋನಿ, ಕಣಬರ್ಗಿರೋಡ್, ಬೆಳಗಾವಿ ಜಿಲ್ಲೆ | 646896 | 631445 | 637000 |
| 5 | ಬಳ್ಳಾರಿ | ಸೆಂಟರ್ ಫಾರ್ ರೂರಲ್ ಡೆವಲಪ್ಮೆಂಟ್, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಪ್ರಶಾಂತ ನಿಲಯ, ಜೈಲ್ ಗೋಡೆ ಹಿಂಭಾಗ,ಪಾರ್ವತಿನಗರ, ಮುಖ್ಯ ರಸ್ತೆ, ಬಳ್ಳಾರಿ ಜಿಲ್ಲೆ. | 644496 | 580500 | 625000 |
| 6 | ವಿಜಯನಗರ | ಸುರಭಿ ಸಮಗ್ರ ಮಾನವ ಕಲ್ಯಾಣ ಅಭಿವೃದ್ಧಿ ಸಂಸ್ಥೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, 32ನೇ ವಾರ್ಡ್, ಬಾಣದಕೇರಿ ಗರಡಿ ಮನೆ ಹತ್ತಿರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ-583203 | 596324 | 597608 | 632000 |
| 7 | ಬೀದರ್ | ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳ , ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಮನ್ನಳ್ಳಿ ರಸ್ತೆ, ಬಿ.ವ್ಹಿ.ಬಿ.ಕಾಲೇಜು, ಬಲಭಾಗ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ, ಬೀದರ್ ಜಿಲ್ಲೆ. | 634896 | 598096 | 644450 |

| ಕ್ರ.ಸಂ | ಜಿಲ್ಲೆಗಳು | ಸ್ವಯಂಸೇವಾ ಸಂಸ್ಥೆಗಳು | ಬಿಡುಗಡೆಯಾದ ಅನುದಾನ | | |
|---|---|---|---|---|---|
| | | | 2022-23 | 2023-24 | 2024-25 |
| 8 | ವಿಜಯಪುರ | ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಡಾ|| ಎಸ್ ರಾಧಾ ಕೃಷ್ಣ ನಗರ ಬ.ಬಾಗೇವಾಡಿ ರಸ್ತೆ ವಿಜಯಪುರ | 646496 | 619750 | 584788 |
| 9 | ಚಾಮರಾಜನಗರ | ರಾಜೀವ್ ಗಾಂಧಿ ಎಜುಕೇಷನ್ ಅಂಡ್ ವೆಲ್ಫೇರ್ ಟ್ರಸ್ಟ್, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, # 84 ಲಕ್ಷ್ಮಿ ನಿಲಯ, ಜಾಲಹಳ್ಳಿ ಹುಂಡಿ ರಸ್ತೆ, ಸುಧಾಮನಗರ, ಚಾಮರಾಜನಗರ ಜಿಲ್ಲೆ. | 635496 | 611121 | 637746 |
| 10 | ಚಿಕ್ಕಬಳ್ಳಾಪುರ | ದೀನ್ ದಯಾಳ್ ಜನಸೇವಾ ಸಮಿತಿ(ರಿ), ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಶ್ರೀನಿವಾಸ ಬಿಲ್ಡಿಂಗ್, ರೈಲ್ವೆ ಸ್ಟೇಷನ್ ಮುಂಬಾಗ, ಚಾಮರಾಜಪೇಟೆ, ಚಿಕ್ಕಬಳ್ಳಾಪುರ ಜಿಲ್ಲೆ. | 644496 | 608831 | 644496 |
| 11 | ಚಿಕ್ಕಮಗಳೂರು | ಕಸ್ತೂರಬಾ ಸದನ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ತಿಲಕ್ ಪಾರ್ಕ್ ರಸ್ತೆ, ವಿಜಯಪುರ, ಬಡಾವಣೆ, ಚಿಕ್ಕಮಗಳೂರು ಜಿಲ್ಲೆ. | 664996 | 564996 | 564996 |
| 12 | ಚಿತ್ರದುರ್ಗ | ಶ್ರೀ ಬಸವೇಶ್ವರ ವಿದ್ಯಾ ಸಂಸ್ಥೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಕೋರ್ಟ್ ಮುಂಭಾಗ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ-577527 | 632496 | 621664 | 778321 |
| 13 | ದಕ್ಷಿಣ ಕನ್ನಡ | ಪ್ರಜ್ಞಾ ಸಲಹಾ ಕೇಂದ್ರ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಫಳ್ನೀರ್ ರಸ್ತೆ, ಕಂಕನಾಡಿ, ಮಂಗಳೂರು | 634896 | 598096 | 634896 |
| 14 | ಧಾರವಾಡ | ರುಡಾಲ್ಫ್ ಸ್ಟೈನರ್ ಎಜುಕೇಷನ್ ಅಂಡ್ ವೆಲ್ಫೇರ್ ಸೊಸೈಟಿ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಹಿಂದಿ ಪ್ರಚಾರ ಸಭೆ ಹತ್ತಿರ, ಡಿ.ಸಿ.ಕಾಂಪೌಂಡ್, ಧಾರವಾಡ ಜಿಲ್ಲೆ | 632872 | 611000 | 637791 |

| ಕ್ರ.ಸಂ | ಜಿಲ್ಲೆಗಳು | ಸ್ವಯಂಸೇವಾ ಸಂಸ್ಥೆಗಳು | ಬಿಡುಗಡೆಯಾದ ಅನುದಾನ | | |
|---|---|---|---|---|---|
| | | | 2022-23 | 2023-24 | 2024-25 |
| 15 | ಕಲಬುರಗಿ | ಪ್ರಜ್ಞಾ ಕಾನೂನು ಸಲಹಾ ಸಮಿತಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಪೊಲೀಸ್ ಮಹಾನಿರೀಕ್ಷಕರು, ಈಶಾನ್ಯ ವಲಯ, ಮಹಿಳಾ ಪೊಲೀಸ್ ಕಛೇರಿ ಆವರಣ, ಕಲಬುರಗಿ ಉತ್ತರ-585105 | 576996 | 548246 | 576996 |
| 16 | ಹಾಸನ | ಜೀವನಾಧಾರಾ ಸೇವಾ ಕೇಂದ್ರ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ,, ಜೀವನಧಾರ ಸೇವಾ ಕೇಂದ್ರ,ಲಕ್ಷ್ಮೀಪುರ ಬಡಾವಣೆ, 2ನೇ ಕ್ರಾಸ್, ಹಾಸನ ಜಿಲ್ಲೆ. | 644496 | 603496 | 644496 |
| 17 | ಹಾವೇರಿ | ಶ್ರೀ ಶಕ್ತಿ ಅಸೋಸಿಯೇಷನ್, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಹಾವೇರಿ ಕುಳೇನೂರ ಬಿಲ್ಡಿಂಗ್, ಉದಯ ನಗರ ಗುತ್ತಲ ರೋಡ್ , ಹಾವೇರಿ ಜಿಲ್ಲೆ-581110 | 634158 | 591352 | 625248 |
| 18 | ಕೊಡಗು | ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆ, ಚೇತನ ಚಿಲುಮೆ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣ ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ-571201 | 639248 | 618614 | 638748 |
| 19 | ಕೋಲಾರ | ಮಹಿಳಾ ಜಾಗೃತಿ ವೇದಿಕೆ, ಕೋಲಾರ ಜಿಲ್ಲೆ (2025-26ನೇ ಸಾಲಿನಿಂದ ) | - | - | - |
| 20 | ಕೊಪ್ಪಳ | ಡಾ.ಬಿ.ಆರ್.ಅಂಬೇಡ್ಕರ್ ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಸಂಸ್ಥೆ, ಮಹಿಳಾ ಸಹಾಯವಾಣಿ ಸಾಂತ್ವಾನ ಕೇಂದ್ರ, ಎನ್.ಓ.ಆರ್ 163/96, ಬಸವೇಶ್ವರ ನಗರ, ಕೊಪ್ಪಳ ಜಿಲ್ಲೆ-583231 | 644496 | 598096 | 639648 |
| 21 | ಮೈಸೂರು | ಶಕ್ತಿಧಾಮ (ರಿ), ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, 18-1ಬಿ. ಮೈಸೂರು-ಊಟಿ ರಸ್ತೆ, ಜೆ.ಎಸ್.ಎಸ್.ಕಾಲೇಜ್ ಹತ್ತಿರ, ಮೈಸೂರು | 576996 | 573913 | 576996 |
| 22 | ರಾಯಚೂರು | ಸೇವಾ ಸಂಸ್ಥೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, #12-11-110/0, ತುರಬ್ ಅಲಿಬಾಬ ದರ್ಗ ಎದುರುಗಡೆ, ಅರಬ್ಮೊಹಲ್ಲಾ, ರಾಯಚೂರು ಜಿಲ್ಲೆ | 623448 | 587080 | 632496 |

| ಕ್ರ.ಸಂ | ಜಿಲ್ಲೆಗಳು | ಸ್ವಯಂಸೇವಾ ಸಂಸ್ಥೆಗಳು | ಬಿಡುಗಡೆಯಾದ ಅನುದಾನ | | |
|---|---|---|---|---|---|
| | | | 2022-23 | 2023-24 | 2024-25 |
| 23 | ರಾಮನಗರ | ಧ್ವನಿ ಗ್ರಾಮೀಣಾಭಿವೃದ್ಧಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ೧ನೇ ವಾರ್ಡ್, ದೇವರಸೇಗೌಡನ ದೊಡ್ಡಿ ಮುಖ್ಯರಸ್ತೆ, ರಾಮನಗರ | 674293 | 589496 | 637746 |
| 24 | ತುಮಕೂರು | ವರದಕ್ಷಿಣಾ ವಿರೋದಿ ವೇದಿಕೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ತುಮಕೂರು ನಗರ ಅಶೋಕ ಕಾಂಪೌಡ್, ಉಪ್ಪಾರಹಳ್ಳಿ , ರೈಲ್ವೆ ಗೇಟ್ ಹತ್ತಿರ, ಎಸ್.ಎಸ್.ಪುರಂ, ತುಮಕೂರು ಜಿಲ್ಲೆ-572101 | 643000 | 615000.00 | 644000 |
| 25 | ಉಡುಪಿ | ಜಿಲ್ಲಾ ಮಹಿಳಾ ಮಂಡಳ ಒಕ್ಕೂಟ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ಕೃಷ್ಣಾ ಕಾಂಪೌಂಡ್, ಕೋರ್ಟ್ ಹಿಂಬದಿ ರಸ್ತೆ , ವಿಶ್ವಾಸ್ ಟವರ್ ಹತ್ತಿರ ಉಡುಪಿ ಜಿಲ್ಲೆ-576101 | 478872 | 407916 | 651624 |
| 26 | ಉತ್ತರಕನ್ನಡ | ಕರುಣಾ ಅಖಿಲ ಭಾರತೀಯ ಮಹಿಳಾ ಮತ್ತು ಮಕ್ಕಳ ಸಂಸ್ಥೆ, ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ, ನಂ.495, ತೆಲಿರಾಮಜಿ ರೋಡ್, ಉತ್ತರಕನ್ನಡ ಜಿಲ್ಲೆ | 647872 | 604923 | 633588 |
| 27 | ಶಿವಮೊಗ್ಗ | ಜಿಲ್ಲಾ ಸಾಂತ್ವನ ಕೇಂದ್ರವನ್ನು 2021ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿದೆ | | | |
| 28 | ಗದಗ | ಜಿಲ್ಲಾ ಸಾಂತ್ವನ ಕೇಂದ್ರವನ್ನು 2021ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿದೆ | | | |
| 29 | ದಾವಣಗೆರೆ | ಜಿಲ್ಲಾ ಸಾಂತ್ವನ ಕೇಂದ್ರವನ್ನು 2021ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿದೆ | | | |
| 30 | ಮಂಡ್ಯ | ಜಿಲ್ಲಾ ಸಾಂತ್ವನ ಕೇಂದ್ರವನ್ನು 2021ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿದೆ | | | |
| 31 | ಯಾದಗಿರಿ | ಸಾಂತ್ವನ ಕೇಂದ್ರ ಮಂಜೂರಾಗಿರುವುದಿಲ್ಲ | | | |